**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕ: 17.06.2026

**ಪಾಟೀ ಸವಾಲು:-** ಶ್ರೀ ವಾದಿಯ ಪರ ವಕೀಲರಿಂದ

ಬಸವಯ್ಯ ನನ್ನ ತಂದೆ. ಪಾರ್ವತಮ್ಮ ನನ್ನ ದೊಡ್ಡಮ್ಮ. ನನ್ನ ತಂದೆಗೆ ಅನಾರೋಗ್ಯ ಎಂದು ಹೇಳಿದ್ದು ವೈದ್ಯಕೀಯ ದಾಖಲಾತಿಗಳನ್ನು ನೀಡಿರುವುದಿಲ್ಲ. ನನ್ನ ತಂದೆ ಜೊತೆ ಮೂರು ಜನ ಸಹೋದರರು ಇರುತ್ತಾರೆ. ನನ್ನ ಜನನ ದಿ: 10.04.1988 ಆಗಿರುತ್ತದೆ. ನನ್ನ ಜನನ ಪ್ರಮಾಣ ಪತ್ರವನ್ನು  ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನನ್ನ ಅಜ್ಜಿ ಹೆಬೆಟ್ಟು ಗುರುತು ಹಾಕುತ್ತಿದ್ದರು, ವಾದಿ ನನ್ನ ದೊಡ್ಡಪ್ಪ ಹೆಬ್ಬೆಟ್ಟು ಹಾಕುತ್ತಿದ್ದರು.  ವಾದಿಯು ಸಹಿ ಮಾಡುತ್ತಿದ್ದರು, ಹೆಬ್ಬೆಟ್ಟು  ಹಾಕುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರು ಮಾಡಿರುವ ಪಾಲುಪಟ್ಟಿಯನ್ನು ನನ್ನ ತಂದೆ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ಅದೇ ರೀತಿ ಪಾಲುಪಟ್ಟಿಯಲ್ಲಿ ವಾದಿಯ ಹೆಬ್ಬೆಟ್ಟನ್ನು ನನ್ನ ತಂದೆಯು ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ಸದರಿ ಪಾಲುಪಟ್ಟಿ 1993 ರಲ್ಲಿ ಆಗಿರುತ್ತದೆ, ಆಗ ನನಗೆ 5 ವರ್ಷ ಎಂದರೆ ಸರಿ. ಆದಾ ಕಾರಣ ಸದರಿ ಪಾಲುಪಟ್ಟಿ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ದ್ಯಾವಮ್ಮರವರಿಗೆ ಸರ್ಕಾರದಿಂದ ಮಂಜೂರು ಆಗಿದೆ ಎಂದರೆ ಸಾಕ್ಷಿಯು ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ದ್ಯಾವಮ್ಮರವರು ವಾದಿಗೆ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಮರಣ ಶಾಸನ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಬಗ್ಗೆ ಹಾಸನ ಎಸಿ ನ್ಯಾಯಾಲಯದಲ್ಲಿ ಹಾಗೂ ತಹಶೀಲ್ದಾರ್ ಕಛೇರಿಯಲ್ಲಿ ದಾವಾ ಹೂಡಿದ್ದು ವಾದಿ ಪರವಾಗಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಎಸಿ ನ್ಯಾಯಾಲಯದ ಪ್ರಕರಣದ ಬಗ್ಗೆ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ತಂದೆ, 2ನೇ ಪ್ರತಿವಾದಿ ನನ್ನ ದೊಡ್ಡಮ್ಮ ಎಂದರೆ ಸರಿ. ಸಾಕ್ಷಿಗೆ ನಕಲು ಎಸಿ ನ್ಯಾಯಾಲಯದ ಆದೇಶ ಪ್ರತಿಯನ್ನು ತೋರಿಸಿ ಅದರಂತೆ ವಾದಿಯ ಪರವಾಗಿ ಆದೇಶವಾಗಿದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಪಹಣಿ ವಾದಿಯ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಎಸಿ ಮತ್ತು ತಹಶೀಲ್ದಾರ್ ರವರ ಆದೇಶವನ್ನು ಪ್ರಶ್ನೆ ಮಾಡಿ ಮೇಲ್ಮನವಿ ಸಲ್ಲಿಸಿರುವುದಿಲ್ಲ. ನಿಡಿ-2, 3 ಪಹಣಿಗಳನ್ನು ಕಂದಾಯ ಅಧಿಕಾಯ ಜೊತೆ

ಷರೀಕ್ ಮಾಡಿಕೊಂಡು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಹಾಕುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ ವಾದಿ ಸ್ವಾಧೀನ ಇದ್ದರು ಎಂದರೆ ಸರಿಯಲ್ಲ. ವಿಲ್ ಪ್ರಕಾರ ದಾವಾ ಸ್ವತ್ತಿನ ಸ್ವಾಧೀನದಲ್ಲಿ ವಾದಿ ಇದ್ದಾರೆ ಎಂದರೆ ಸಾಕ್ಷಿಯು ನಾವು ಸ್ವಾಧೀನ ಇದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಈಗಲೂ ವಾದಿಯೇ ಉಳಿಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ವಾದಿಯ ದಾವಾ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ಸತ್ಯ ಹೊರಬರುತ್ತದೆ ಎಂದು ಅವರು ನ್ಯಾಯಾಲಯಕ್ಕೆ ಹಾಜರು ಆಗುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಯಾವತ್ತು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇಲ್ಲ ಎಂದರೆ ಸಾಕ್ಷಿಯು ನಾವು ಇದ್ದೇವೆ ಎಂದು ನುಡಿಯುತ್ತಾರೆ. ನಾನು, ನನ್ನ ತಂದೆ, ಹಾಗೂ ನನ್ನ ದೊಡ್ಡಮ್ಮ ವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಸಂಬಂಧ ದಿಃ 16.08.2017 ರಂದು ವಾದಿ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದೂರಿನಂತೆ ಪೊಲೀಸ್ ರವರು ನನ್ನ ಮೇಲೆ ಕ್ರಮ ಜರುಗಿಸಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ